ದಿನಾಂಕಃ 25.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ 2 ಮತ್ತು 6 ನೇ ಪ್ರತಿವಾದಿ ಪರ ಶ್ರೀ. ಓ. ಬಿ. ಜೆ ವಕೀಲರಿಂದಃ**

ಈಗಾಗಲೇ ಮೇಲೆ ಹೇಳಿದಂತೆ ನನ್ನ ತಾಯಿಯ ಹೆಸರಿನಲ್ಲಿ ಬ್ಯಾಂಕಿನಲ್ಲಿ ಇಟ್ಟಿದ್ದ ನಿಗದಿ ಠೇವಣಿಗಳ ಮೊತ್ತವನ್ನು ಬ್ಯಾಂಕಿನಿಂದ ಪಡೆಯುವ ಕಾಲಕ್ಕೆ ಸದರಿ ನಿಗದಿತ ಠೇವಣಿಗಳ ರಸೀದಿಗಳು ನನ್ನ ಬಳಿ ಇರಲಿಲ್ಲ. ಸಾಕ್ಷಿ ಮುಂದುವರೆದು ನಾನು ಪೊಲೀಸ್ ಠಾಣೆಗೆ ಹೋಗಿ ಸದರಿ ಠೇವಣಿ ರಸೀದಿಗಳು ಕಳೆದಿರುತ್ತವೆ ಎಂದು ದೂರನ್ನು ನೀಡಿ ಬ್ಯಾಂಕಿನವರಿಂದ ಸದರಿ ಠೇವಣಿಗಳ ಮೊತ್ತವನ್ನು ನನ್ನ ಹೆಸರಿಗೆ ಪಡೆದುಕೊಂಡಿರುತ್ತೇನೆ, ಸದರಿ ಠೇವಣಿ ರಸೀದಿಗಳನ್ನು 2ನೇ ಪ್ರತಿವಾದಿ ಹಾಜರುಪಡಿಸಿರುತ್ತಾನೆಂದರೆ ನಿಜ. ಸದರಿ ಠೇವಣಿ ರಸೀದಿಗಳು 2 ನೇ ಪ್ರತಿವಾದಿ ಬಳಿ ಇರುವ ಬಗ್ಗೆ ನನಗೆ ಗೊತ್ತಿದ್ದರೂ ಸಹ ಸದರಿ ಹಣ ಪ್ರತಿವಾದಿಯರಿಗೆ ಹೋಗಬಾರದು, ಎಲ್ಲಾ ಹಣವನ್ನು ನಾನೊಬ್ಬಳೇ ಪಡೆಯಬೇಕೆನ್ನುವ ಉದ್ದೇಶದಿಂದ ಪೊಲೀಸ್ ಠಾಣೆಯಲ್ಲಿ ಸದರಿ ಠೇವಣಿ ರಸೀದಿಗಳು ಕಳೆದುಹೋಗಿರುತ್ತವೆ ಎಂದು ಖೊಟ್ಟಿ ದೂರನ್ನು ನೀಡಿ, ಬ್ಯಾಂಕಿನಿಂದ ಠೇವಣಿ ಹಣವನ್ನು ಪಡೆದಿರುತ್ತೇನೆಂದರೆ ಸರಿಯಲ್ಲ.

ದಾವಾ ಆಸ್ತಿ ಅನುಕ್ರಮ ಸಂಖ್ಯೆ ಜಿ ಮತ್ತು ಹೆಚ್ ಅಂದರೆ ಸಿ ಟಿ ಎಸ್ ನಂಬರ 3287/ಬಿ1 ಮತ್ತು ಸಿ ಟಿ ಎಸ್ ನಂಬರ 3287/ಬಿ2 ಎರಡೂ ಅಸ್ತಿಗಳನ್ನು ದಿ.04.08.1977 ರಂದು ನಮ್ಮ ಅಜ್ಜಿ ಗೌರವ್ವಾ ಮತ್ತು 2 ನೇ ಪ್ರತಿವಾದಿ ವಿರೇಶರವರು ನರಸುಬಾಯಿ ಮತ್ತು ಅವರ ಮಕ್ಕಳಿಂದ ಖರೀದಿ ಪಡೆದಿರುತ್ತಾರೆಂದರೆ ಸಾಕ್ಷಿಯು ನಮ್ಮ ಅಜ್ಜಿ ಗೌರವ್ವಾ ಮಾತ್ರ ಸದರಿ ಆಸ್ತಿಗಳನ್ನು

ಖರೀದಿಸಿರುತ್ತಾಳೆಂದು ನುಡಿಯುತ್ತಾರೆ. ಸದರಿ ನಮ್ಮ ಅಜ್ಜಿ ಗೌರವ್ವಾ ಇವಳು ಸನ್ 1988 ರಲ್ಲಿ ತೀರಿಕೊಂಡಿರುತ್ತಾಳೆ. ಸದರಿ ಎರಡೂ ಆಸ್ತಿಗಳು ಮೊದಲಿನಿಂದಲೂ 2 ನೇ ಪ್ರತಿವಾದಿಯ ಹೆಸರಿಗೆ ದಾಖಲು ಇರುತ್ತವೆ ಎಂದರೆ ಸಾಕ್ಷಿಯು ನಮ್ಮ ಅಜ್ಜಿಯ ಹೆಸರಿಗೆ ದಾಖಲು ಇದ್ದವು ಎಂದು ನುಡಿಯುತ್ತಾರೆ. ನಮ್ಮ ಅಜ್ಜಿ ತೀರಿಕೊಂಡ ನಂತರ ಸದರಿ ಆಸ್ತಿಗಳು ಯಾರ ಹೆಸರಿಗೆ ದಾಖಲು ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳು 2 ನೇ ಪ್ರತಿವಾದಿಯ ಹೆಸರಿಗೆ ಇರುತ್ತವೆ ಎಂದರೆ ಸರಿಯಲ್ಲ. ದಾವೆ ಹಾಕುವ ಪೂರ್ವದಲ್ಲಿ ಸದರಿ ಆಸ್ತಿಗಳು ಯಾರ ಹೆಸರಿಗೆ ಇರುತ್ತವೆ ಎಂದು ನಾನು ಉತಾರೆಗಳನ್ನು ತೆಗೆಸಿ ನೋಡಿರುವುದಿಲ್ಲ ಹಾಗೂ ಆ ಬಗ್ಗೆ ವಿಚಾರಿಸಿಲ್ಲ ಆದರೆ ನಮ್ಮ ಅಜ್ಜಿಯ ಹೆಸರಿಗೆ ಇದ್ದುದರಿಂದ ಅವುಗಳನ್ನು ದಾವೆಯಲ್ಲಿ ಸೇರಿಸಿರುತ್ತೇನೆ. ಸದರಿ ಎರಡೂ ಆಸ್ತಿಗಳನ್ನು 2ನೇ ಪ್ರತಿವಾದಿಯು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆಂದರೆ ನಿಜ. ಯಾವುದೇ ಆಸ್ತಿಯನ್ನು ಖರೀದಿ ಮಾಡಬೇಕಾದರೆ ಖರೀದಿ ಕೊಡುವವರ ಹೆಸರಿಗೆ ಆಸ್ತಿ ದಾಖಲಾಗಿದ್ದರೆ ಮಾತ್ರ ಖರೀದಿ ಪತ್ರವನ್ನು ಸ್ವೀಕರಿಸುತ್ತಾರೆಂದರೆ ನಿಜ. ನಮ್ಮ ಅಜ್ಜಿ ತೀರಿಕೊಂಡ ನಂತರ ಸದರಿ ಆಸ್ತಿಗಳಿಗೆ ನನ್ನ ಹೆಸರನ್ನು ಸೇರಿಸಿಕೊಳ್ಳಲು ಇವತ್ತಿನವರೆಗೂ ಪ್ರಯತ್ನಿಸಿರುವುದಿಲ್ಲ ಎಂದರೆ ನಿಜ. ಸದರಿ ಎರಡೂ ಆಸ್ತಿಗಳು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಇದ್ದು ಆತನು ಕಾನೂನು ಬದ್ಧವಾಗಿ ಸದರಿ ಆಸ್ತಿಗಳನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಸದರಿ ಸಂಗತಿಗಳು ನನಗೆ ಗೊತ್ತಿದ್ದರೂ ಸಹ 2 ಮತ್ತು 6ನೇ

ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ಆಸ್ತಿಗಳನ್ನು ಸಹ ದಾವೆಯಲ್ಲಿ ಸೇರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮುಂಚೆ ನಾನು, ನನ್ನ ತಾಯಿ, 2 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಹೊಸಪೇಟ ಗಲ್ಲಿಯಲ್ಲಿರುವ ಮನೆಯಲ್ಲಿ ವಾಸವಾಗಿದ್ದಾಗ 2 ನೇ ಪ್ರತಿವಾದಿಗೆ ಹಾಗೂ ನಮಗೆ ಹೊಂದಾಣಿಕೆಯಾಗದೇ ಇದ್ದುದರಿಂದ ಸನ್ 1993-94 ರಲ್ಲಿ 2 ನೇ ಪ್ರತಿವಾದಿ ತನ್ನ ಹೆಂಡತಿಯೊಂದಿಗೆ ಹೊಸಪೇಟ ಗಲ್ಲಿಯಲ್ಲಿರುವ ಛಾಯಾ ಜೋಶಿಯವರ ಮನೆಯಲ್ಲಿ ಬಾಡಿಗೆ ತರೀಖವಾಗಿ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿರುತ್ತಾನೆಂದರೆ ನಿಜ. 2 ನೇ ಪ್ರತಿವಾದಿ ಲಕ್ಷ್ಮೀ ಎಕ್ಸಟೇನ್ಸನ್ ಏರಿಯಾದಲ್ಲಿ ಸ್ವಂತ ಮನೆ ಕಟ್ಟಿಸಿದ್ದರಿಂದ ಸದರಿ ಬಾಡಿಗೆ ಮನೆಯನ್ನು ಬಿಟ್ಟು ಅಲ್ಲಿಗೆ ವಾಸಿಸಲು ಹೋಗಿರುತ್ತಾರೆಂದರೆ ಸಾಕ್ಷಿಯು ಲಕ್ಷ್ಮೀ ಎಕ್ಸಟೇನ್ಸನ್ ಏರಿಯಾದಲ್ಲಿ 2 ನೇ ಪ್ರತಿವಾದಿ ಸ್ವಂತ ಮನೆ ಕಟ್ಟಿಸಿರುವುದಿಲ್ಲ ಆದರೆ ಆತನು ಬಾಡಿಗೆ ಮನೆಯಿಂದ ಹೊಸಪೇಟ ಗಲ್ಲಿಯಲ್ಲಿರುವ ತನ್ನ ಮೆಡಿಕಲ್ ಶಾಪ್ ಇರುವ ಬಿಲ್ಡಿಂಗನಲ್ಲಿ ವಾಸಿಸಲು ಪ್ರಾರಂಭಿಸಿರುತ್ತಾನೆಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಬಾಡಿಗೆ ಮನೆಯನ್ನು ಬಿಟ್ಟು ಸ್ವಂತ ಮನೆಗೆ ಬಂದಿರುತ್ತಾನೆಂದು ನನಗೆ ಹೇಳಲು ಆಗುವುದಿಲ್ಲ. 2 ನೇ ಪ್ರತಿವಾದಿಯ ಛಾಯಾ ಜೋಶಿಯವರ ಮನೆಯಲ್ಲಿ ಎಷ್ಟು ವರ್ಷಗಳ ಕಾಲ ಬಾಡಿಗೆಗಾಗಿ ವಾಸವಾಗಿದ್ದನು ಎಂದು ನನಗೆ ಹೇಳಲು ಆಗುವುದಿಲ್ಲ. ಛಾಯಾ ಜೋಶಿಯವರ ಮನೆಯ ಬಾಡಿಗೆಯನ್ನು ನನ್ನ ತಂದೆಯೇ ಕೊಡುತ್ತಿದ್ದರು. ಸನ್ 2017 ರಿಂದ 2ನೇ ಪ್ರತಿವಾದಿ ಲಕ್ಷ್ಮೀ ಎಕ್ಸಟೇನ್ಸನ್ ಏರಿಯಾದಲ್ಲಿರುವ ಮನೆಯಲ್ಲಿ ವಾಸವಾಗಿದ್ದಾನೆ ಅದರ ನಂಬರ ನನಗೆ ಹೇಳಲು

ಆಗುವುದಿಲ್ಲ. ಸದರಿ ಮನೆಯನ್ನು ನನ್ನ ತಂದೆ ಕಟ್ಟಿಸಿರುತ್ತಾರೆ. ಸದರಿ ಮನೆಯನ್ನು ನನ್ನ ತಂದೆ ಕಟ್ಟಿಸಿರುವ ಬಗ್ಗೆ ನನ್ನ ಬಳಿ ಪುರಾವೆ ಇರುವುದಿಲ್ಲ ಆದರೆ ಆಗ ನಾನು ಇನ್ನೂ ಚಿಕ್ಕವಳಿದ್ದೆ. ಯಾವ ವರ್ಷದಲ್ಲಿ ಮನೆಯನ್ನು ಕಟ್ಟಿಸಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಆಸ್ತಿಯ ಪ್ಲಾಟ ನಂಬರ ವಗೈರೆ ಹೇಳಲು ಆಗುವುದಿಲ್ಲ. ಪ್ರಸ್ತುತ ದಾವೆಯಲ್ಲಿ ಸದರಿ ಆಸ್ತಿಯು ಯಾವ ಅನುಕ್ರಮ ಸಂಖ್ಯೆ ಯಲ್ಲಿ ಇರುತ್ತದೆಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಆಸ್ತಿಯು 2ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಆ ಬಗ್ಗೆ ನನಗೆ ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಸದರಿ ಆಸ್ತಿಯನ್ನು ದಾವೆಯಲ್ಲಿ ಸೇರಿಸಿ ನನಗೂ ಸಹ ಪಾಲು ಇರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ನನ್ನ ಮೊದಲನೇಯ ಗಂಡನ ವಿರುದ್ಧ ಫೋಟಗಿ ದಾವೆಯನ್ನು ಹಾಕಿರುವುದಿಲ್ಲ ಆದರೆ ವಿವಾಹ ವಿಚ್ಛೇಧನ ಕೋರಿ ಕೇಸು ಸಲ್ಲಿಸಿದ್ದೆ. ಸನ್ 1993 ರಲ್ಲಿ ಸದರಿ ಕೇಸನ್ನು ಹಾಕಿದ್ದೆ ಅದು ಸನ್ 1994 ರಲ್ಲಿ ನಿಕಾಲೆಯಾಗಿದ್ದು, ಸದರಿ ಪ್ರಕರಣದ ನಂಬರ ನನಗೆ ನೆನಪಿಲ್ಲ. ಸದರಿ ಪ್ರಕರಣವು ಗೋಕಾಕ ನ್ಯಾಯಾಲಯದಲ್ಲಿ ನಡೆದಿದ್ದು ಆದರೆ ಅದು ಒಪ್ಪಿಗೆಯ ಮೇರೆಗೆ ವಿವಾಹ ವಿಚ್ಛೇಧನ ಆಗಿರುವುದಿಲ್ಲ. ಸನ್ 1993 ರಲ್ಲಿ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ವಾಟ್ನಿಯಾದ ಸಮಯದಲ್ಲಿ ನನ್ನ ವಿವಾಹ ವಿಚ್ಛೇಧನ ಕೇಸಿಗೆ ಸಂಬಂಧಿಸಿದಂತೆ ಪ್ರಕರಣ ಇರಲಿಲ್ಲ ಎಂದರೆ ಸಾಕ್ಷಿಯು ವಿವಾಹ ವಿಚ್ಛೇಧನ ಪ್ರಕರಣ ಚಾಲ್ತಿಯಲ್ಲಿತ್ತು ಎಂದು ನುಡಿಯುತ್ತಾರೆ.

ನಾನು ಶಾಲೆ ಕಲಿತಿದ್ದು, ಯಾವುದೇ ದಾಖಲೆಗೆ ಸಹಿ ಹಾಕಬೇಕಾದರೆ ಓದಿ, ತಿಳಿದುಕೊಂಡು ಸಹಿ ಹಾಕಬೇಕೆನ್ನುವ ತಿಳುವಳಿಕೆ ಇತ್ತು ಎಂದರೆ ನಿಜ. ಸಾಕ್ಷಿ ಮುಂದುವರೆದು ಸನ್ 1993 ರಲ್ಲಿ ನಾನು ನನ್ನ ಗಂಡನ ಮನೆಯನ್ನು ಬಿಟ್ಟು ನನ್ನ ತವರು ಮನೆಯಲ್ಲಿ ವಾಸವಾಗಿದ್ದರಿಂದ ನನ್ನ ಸಹೋದರರು ಹೇಳಿದಂತೆ ದಾಖಲೆಗಳಿಗೆ ಸಹಿ ಹಾಕಿರುತ್ತೇನೆಂದು ನುಡಿಯುತ್ತಾರೆ. ನಿಡಿ.1 ಕ್ಕೆ ನಾನು ಸಹಿ ಹಾಕುವ ಸಮಯದಲ್ಲಿ ಅದರಲ್ಲಿರುವ ಸಂಗತಿಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು ಸಹಿ ಹಾಕಿದ್ದು, ಈಗ ಹೇಗಾದರೂ ಮಾಡಿ ದಾವಾ ಆಸ್ತಿಗಳಿಗೆ ಪಾಲು ಪಡೆಯಬೇಕೆಂಬ ಉದ್ದೇಶದಿಂದ ನನ್ನ ಸಹೋದರರು ಬಿಳಿ ಹಾಳೆಯ ಮೇಲೆ ಸಹಿ ಪಡೆದುಕೊಂಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿ ಪ್ಲಾಟ ನಂಬರ 28 ಸರ್ವೆ ನಂಬರ 207/2 ನೇದ್ದರ ಆಸ್ತಿಯನ್ನು ನಮ್ಮ ತಂದೆ ಖರೀದಿಸಿರುತ್ತಾರೆಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ. ನನ್ನ ತಂದೆ ಸನ್ 1984 ರಲ್ಲಿ ನಿವೃತ್ತಿ ಹೊಂದಿರುತ್ತಾರೆ. ಆ ಸಮಯದಲ್ಲಿ ಅವರು ಎಷ್ಟು ನಿವೃತ್ತಿ ವೇತನ ಪಡೆದಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ಸದರಿ ಆಸ್ತಿಯನ್ನು ನನ್ನ ತಂದೆಯವರು ಖರೀದಿಸಿರುತ್ತಾರೆಂದು ಹೇಳಲು ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ನನ್ನ ಬಳಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ನಿಜ. ಸದರಿ ಆಸ್ತಿಯನ್ನು ನನ್ನ ತಂದೆ ತನ್ನ ನಿವೃತ್ತಿ ವೇತನದಿಂದ ಬಂದ ಹಣದಿಂದ ಖರೀದಿಸಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನನ್ನ ಕುಟುಂಬದ ವ್ಯಾಪಾರ ಹಾಗೂ ಇತರೇ ಮೂಲಗಳಿಂದ ಬಂದ ಆದಾಯದಿಂದ ಖರೀದಿಸಿರುತ್ತಾರೆಂದು

ತೋರಿಸಲು ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ದಾವಾ ಆಸ್ತಿಗಳು ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಪ್ರತಿಪಾದನೆ ಮಾಢಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸನ್ 2018 ರಲ್ಲಿ ದಾವೆ ಹಾಕುವ ಕಾಲಕ್ಕೆ ಹಾಗೂ ಪ್ರಸ್ತುತ ದಾವೆಯನ್ನು ಹಾಕುವ ಕಾಲಕ್ಕೆ ದಾವಾ ಆಸ್ತಿಗಳು ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಅವರು ತಮ್ಮ ವ್ಯಾಪಾರದಿಂದ ಬಂದ ಆದಾಯದಿಂದ ಸದರಿ ಆಸ್ತಿಗಳನ್ನು ಖರೀದಿಸಿದ್ದು, ಹಾಗೂ ಅವರು ತಮ್ಮ ತಮ್ಮ ಆಸ್ತಿಗಳಲ್ಲಿ ಸನ್ 1993 ರಲ್ಲಿ ನಿಡಿ.1 ರಂತೆ ಪಾಲು ವಾಟ್ನಿ ಮಾಡಿಕೊಂಡಿದ್ದು ಆ ಪ್ರಕಾರ ಕಬ್ಜಾ ವಹಿವಾಟಿಯಲ್ಲಿ ಇರುವ ಬಗ್ಗೆ ನನಗೆ ಗೊತ್ತಿದ್ದರೂ ಸಹ ಸನ್ 2018 ರಲ್ಲಿ ಹಾಗೂ ಪ್ರಸ್ತುತ ದಾವೆಯನ್ನು ಖೊಟ್ಟಿಯಾಗಿ ಸಲ್ಲಿಸಿ, ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಪಾಲು ಇರದೇ ಇದ್ದರೂ ಸಹ ಪ್ರತಿವಾದಿಯರಿಗೆ ವಿನಾಕಾರಣ ತೊಂದರೆ ಕೊಟ್ಟು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸನ್ 1993 ರಲ್ಲಿ ಅಥವಾ ಅದಕ್ಕಿಂತ ಪೂರ್ವದಲ್ಲಿ ರೆಡ್ಡಿ ಬ್ಯಾಂಕ ಹಾಗೂ ರತ್ನಾಕರ ಬ್ಯಾಂಕಿನಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಪಟ್ಟಂತೆ ಯಾರು , ಎಷ್ಟು ಸಾಲ ಪಡೆದಿದ್ದರು ಎಂದು ನನಗೆ ಮಾಹಿತಿ ಇಲ್ಲ. ಆ ಬಗ್ಗೆ ನಾನು ಇವತ್ತಿನವರೆಗೂ ಚೌಕಾಸಿ ಮಾಡಿರುವುದಿಲ್ಲ. ಸದರಿ ಸಾಲಗಳ ಮರುಪಾವತಿ ಜವಾಬ್ದಾರಿಯನ್ನು ಸನ್ 1993 ರಲ್ಲಿ ಆದ ವಾಟ್ನಿಯಂತೆ 2 ನೇ ಪ್ರತಿವಾದಿಗೆ ವಹಿಸಿದ್ದರು ಎಂದರೆ ಸಾಕ್ಷಿಯು ಸದರಿ ವಾಟ್ನಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು

ನುಡಿಯುತ್ತಾರೆ. ಸದರಿ ಪಾಲು ವಾಟ್ನಿಯಂತೆ 2 ನೇ ಪ್ರತಿವಾದಿ ರೆಡ್ಡಿ ಬ್ಯಾಂಕ ಮತ್ತು ರತ್ನಾಕರ ಬ್ಯಾಂಕಿನಲ್ಲಿ ಸಾಲದ ಹಣವನ್ನು ಮರು ಪಾವತಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಸಂಗತಿ ನನಗೆ ಗೊತ್ತಿದ್ದರೂ ಸಹ ಪ್ರತಿವಾದಿಯರನ್ನು ಕಾಡಿಸುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ3 ರಿಂದ 5 ನೇ ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

**ಸಾಕ್ಷಿಯ ಸಹಿ**